ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತೊಂದನೆಯ ಅಧಿವೇಶನ

ಗುರುವಾರ, ದಿನಾಂಕ : 24 ನೇ ಸೆಪ್ಟೆಂಬರ್, 2020

ರಾಜ್ಯದಲ್ಲಿ ಸಂಗ್ರಹವಾದ GST ತೆರಿಗೆ ಮೊತ್ತದ ಕುರಿತು

ಶ್ರೀ ಪಿ. ಆರ್. ರಮೇಶ್(ನಾಮನಿರ್ದೇಶನ ಹೊಂದಿದವರು) -

537 (548) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ -

(ಅ) 2017-18ನೇ ಸಾಲಿನಿಂದ ಇಲ್ಲಿಯವರೆಗೆ ರಾಜ್ಯದಲ್ಲಿ ಸಂಗ್ರಹವಾದ SGST, CGST ಮತ್ತು IGST ಮೊತ್ತವೆಷ್ಟು; (ವಿವರ ನೀಡುವುದು)

(ಆ) 2017-18ನೇ ಸಾಲಿನಿಂದ ಇಲ್ಲಿಯವರೆಗೆ ನೇರ GST ಮತ್ತು ಕೇಂದ್ರ ಸರ್ಕಾರದ ಮೂಲಕ ರಾಜ್ಯದ ಬೊಕ್ಕಸಕ್ಕೆ ಸಂದಾಯವಾದ ಮೊತ್ತವೆಷ್ಟು; (ವಿವರ ನೀಡುವುದು)

(ಇ) 2010-11 ರಿಂದ 2016-17ನೇ ಸಾಲಿನವರೆಗೆ ರಾಜ್ಯ ಸರ್ಕಾರದ ಬೊಕ್ಕಸಕ್ಕೆ ತೆರಿಗೆ ಮುಖಾಂತರ ಆರ್ಥಿಕ ಇಲಾಖೆಗೆ ಸಂದಾಯವಾದ ಒಟ್ಟು ಮೊತ್ತವೆಷ್ಟು; (ತೆರಿಗೆವಾರು, ವರ್ಷವಾರು ವಿವರ ನೀಡುವುದು)

(ಈ) GST ಪೂರ್ವ ಮತ್ತು GST ನಂತರದ ರಾಜ್ಯ ಸರ್ಕಾರದ ತೆರಿಗೆ ಆದಾಯದ ಕುರಿತು ಸರ್ಕಾರದ ನಿಲುವೇನು; (ಮಾಹಿತಿ ನೀಡುವುದು)

(ಉ) ಕೇಂದ್ರ ಸರ್ಕಾರದಿಂದ 2017-18ನೇ ಸಾಲಿನಿಂದ ಇಲ್ಲಿಯವರೆಗೆ ಬರಬೇಕಾದ GST ಬಾಕಿ ಮೊತ್ತ ಎಷ್ಟು; (ವರ್ಷವಾರು ವಿವರ ನೀಡುವುದು)

(ಊ) ಪ್ರಸಕ್ತ ವರ್ಷದ ಕರೋನ ಮಹಾಮಾರಿ ಹಿನ್ನೆಲೆಯಲ್ಲಿ ರಾಜ್ಯದಲ್ಲಿನ ತೆರಿಗೆ ಶೇಖರಣೆ ಕುಂಠಿತವಾಗಿದೆಯೇ; ಹಾಗಿದ್ದಲ್ಲಿ, GST ಒಪ್ಪಂದದಂತೆ ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ಸಂದಾಯವಾಗಬೇಕಿದ್ದ ಪರಿಹಾರ ಮೊತ್ತವೆಷ್ಟು; ಇಲ್ಲಿವರೆಗೆ ಎಷ್ಟು ಸಂದಾಯವಾಗಿದೆ? (ಸಂಪೂರ್ಣ ವಿವರ ನೀಡುವುದು)